**ದಿನಾಂಕ ಃ 27.09.2024**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ.ಡಬ್ಲ್ಯೂ - 1**

**ಮುಖ್ಯ ವಿಚಾರಣೆ ಃಅರ್ಜಿದಾರರ ಪರ ವಕೀಲರಿಂದ ಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ ದಾಖಲೆಗಳನ್ನು ಕೆಳಕಂಡಂತೆ ನಿಶಾನೆಗಳನ್ನಾಗಿ ಗುರುತಿಸಲಾಗಿದೆ.

| | |
|---|---|
| ನಿಪಿ.1 | ದಿಃ03.01.2011 ರ ಅವಾರ್ಡ್ ಆದೇಶದ ದೃಢೀಕೃತ ನಕಲು. |
| ನಿಪಿ.2 | ಜಮೀನಿನ ಮಾಲೀಕರಿಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು (ಅನೆಕ್ಷರ್-1) |
| ನಿಪಿ.3 ರಿಂದ 5 | ಬೆಳೆಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು (ಮೂರು) |
| ನಿಪಿ.6 | ದಿಃ13.02.2012 ರ ತಿದ್ದುಪಡಿ ಆದೇಶದ ದೃಢೀಕೃತ ನಕಲು. |
| ನಿಪಿ.7 | ಜಮೀನಿನ ಮಾಲೀಕರಿಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು (ಅನೆಕ್ಷರ್-1) |
| ನಿಪಿ.8 | ಬೆಳೆಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು. |
| ನಿಪಿ.9 | ದಿಃ24.04.2012 ರ ಹೆಚ್ಚುವರಿ ಅವಾರ್ಡ್-1 ರ ದೃಢೀಕೃತ ನಕಲು. |
| ನಿಪಿ.10 | ಜಮೀನಿನ ಮಾಲೀಕರಿಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು (ಅನೆಕ್ಷರ್-1 ಹೆಚ್ಚುವರಿ ಅವಾರ್ಡ್-1) |
| ನಿಪಿ.11 | ಬೆಳೆಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು. |
| ನಿಪಿ.12 | ದಿಃ29.06.2012 ರ ಹೆಚ್ಚುವರಿ ಅವಾರ್ಡ್-2 ರ ದೃಢೀಕೃತ ನಕಲು. |
| ನಿಪಿ.13 | ಜಮೀನಿನ ಮಾಲೀಕರಿಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು (ಅನೆಕ್ಷರ್-1 ಹೆಚ್ಚುವರಿ ಅವಾರ್ಡ್-2) |
| ನಿಪಿ.14 | ಬೆಳೆಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ |

| | |
|---|---|
| | ನಕಲು. |
| ನಿಪಿ.15 | ದಿ:17.09.2011 ರ ಹೆಚ್ಚುವರಿ ಅವಾರ್ಡ್-3 ರ ದೃಢೀಕೃತ ನಕಲು. |
| ನಿಪಿ.16 | ಜಮೀನಿನ ಮಾಲೀಕರಿಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು (ಅನೆಕ್ಷರ್-1 ಹೆಚ್ಚುವರಿ ಅವಾರ್ಡ್-3) |
| ನಿಪಿ.17 | ಬೆಳೆಗೆ ಸಂಬಂಧಪಟ್ಟ ಪರಿಹಾರದ ಬಗ್ಗೆ ಕ್ಯಾಲುಕ್ಲೇಷನ್ ನ ದೃಢೀಕೃತ ನಕಲು. |

**(ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶವನ್ನು ಕೋರಿರುವುದರಿಂದ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ರಾಮನಗರ.

**ದಿನಾಂಕ ಃ 27.06.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲೂ - 1**

**ಪಾಟೀ ಸವಾಲು ಃ ಎದುರುದಾರರ ಪರ ಶ್ರೀ.ಎಸ್.ಜೆ.ಕೆ., ವಕೀಲರಿಂದ ಃ**

ಈ ಕೇಸಿನಲ್ಲಿ ಹೇಳಿರುವ ಜಾಗದ ಉಪಯೋಗದ ಹಕ್ಕನ್ನು 2011 ರಲ್ಲಿ 2ನೇ ಎದುರುದಾರರು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ 1ನೇ ಎದುರುದಾರರು ನಮ್ಮ ತಾಯಿಗೆ ನೋಟಿಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಹೇಳಿರುವ ಜಾಗಕ್ಕೆ ಎದುರುದಾರರುಗಳು ಬಂದು ಮಹಜರನ್ನು ಮಾಡಿದ್ದರು ಎಂದರೆ ಸರಿ. ನನ್ನ ತಾಯಿ ಆ ಮಹಜರ್ ಗೆ ರುಜು ಹಾಕಿದ್ದಾರೆ ಎಂದರೆ ಸರಿ. 2011 ರಲ್ಲಿ ಗ್ರಾಮದ ಜಾಗಗಳನ್ನು 2ನೇ ಎದುರುದಾರರು ಉಪಯೋಗದ ಹಕ್ಕನ್ನು ತೆಗೆದುಕೊಂಡಾಗ ಡಿ.ಸಿ.ಯವರು ಒಂದು ಮೀಟಿಂಗನ್ನು ಗ್ರಾಮಸ್ಥರು ಮತ್ತು ಗ್ರಾಮದ ಮುಖಂಡರೊಂದಿಗೆ ಕರೆದಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

2. ಆ ಮೀಟಿಂಗ್ ನಲ್ಲಿ ಡಿ.ಸಿ.ಯವರು ಮತ್ತು ಗ್ರಾಮಸ್ಥರ ನಡುವೆ ಒಂದು ಒಪ್ಪಿಗೆ ಆಗಿದ್ದು, ಆ ಒಪ್ಪಿಗೆಯಲ್ಲಿ ಜಾಗದ ಬೆಲೆಯನ್ನು 3 ಪಟ್ಟು ಹೆಚ್ಚಿಸಿ ಪರಿಹಾರ ಕೊಡುವುದು ಎಂದು ತೀರ್ಮಾನವಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಅದರ ಪ್ರಕಾರ ನಮಗೆ ನಮ್ಮ ಜಾಗದ ಬೆಲೆಗಿಂತ ಹೆಚ್ಚಿನ ಬೆಲೆಯಲ್ಲಿ ಪರಿಹಾರವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಪೈಪ್ ಲೈನ್ ಹಾಕಿದ ನಂತರ ಆ ಜಾಗವನ್ನು ವಾಪಸ್ಸು ನಮಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಆ ಜಾಗದಲ್ಲಿ ಬೆಳೆ ಬೆಳೆದುಕೊಳ್ಳಬಹುದು, ಆದರೆ ಮರಗಳನ್ನು ಹಾಕಲು ಆಗುವುದಿಲ್ಲ. ಈ ರೀತಿಯ ತೊಂದರೆ ಆಗಿರುವ ಬಗ್ಗೆ ಸಾಕಷ್ಟು ಪರಿಹಾರವನ್ನು 2ನೇ ಎದುರುದಾರರು ನಮಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

3. ನಮಗೆ 1,95,396/- ರೂ.ಗಳನ್ನು ಪರಿಹಾರವಾಗಿ ಕೊಟ್ಟಿದ್ದಾರೆ. ನಮಗೆ ಹೆಚ್ಚಿನ ಪರಿಹಾರ ಕೊಡಬೇಕು ಎಂದು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ವಕೀಲರಿಗೆ ಕೊಟ್ಟಿದ್ದೇನೆ. ಆ ರೀತಿ ಯಾವುದೇ ದಾಖಲೆಗಳನ್ನು ನಾನು ಇಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳೆಲ್ಲಾ

ಸತ್ಯಕ್ಕೆ ದೂರವಾದ ಅಂಶಗಳು ಎಂದರೆ ಸರಿಯಲ್ಲ. 2ನೇ ಎದುರುದಾರರು ನಾನು ಕೇಳಿರುವಂತೆ ಹೆಚ್ಚಿನ ಪರಿಹಾರವನ್ನು ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

**(ಬಿ.ವಿ. ರೇಣುಕ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**